ವಿಷಯ:- ಇಂಡಿ ತಾಲ್ಲೂಕಿನಲ್ಲಿ ಭೂಕಂಪದಿಂದ ಆಸ್ತಿ–ಪಾಸ್ತಿ ಕಳೆದುಕೊಂಡವರಿಗೆ ಪುನರ್‌ವಸತಿಯನ್ನು ಕಲ್ಪಿಸುವಲ್ಲಿ ಆಗಿರುವ ಅನ್ಯಾಯ.

1461 (2214) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್‌ಕಲ್):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ 30-9-93ರಂದು ಆದಂತಹ ಭಾರಿ ಭೂ ಕಂಪನದಿಂದ ಇಂಡಿ ತಾಲ್ಲೂಕಿನ ಧೂಳಖೇಡ ಗ್ರಾಮದ ವಾಸಿಗಳು ತಮ್ಮ ಆಸ್ತಿ–ಪಾಸ್ತಿಯನ್ನು ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಂಪನದಿಂದ ಆಸ್ತಿ–ಪಾಸ್ತಿಗಳನ್ನು ಕಳೆದು ಕೊಂಡವರ ಪಟ್ಟಿಯನ್ನು ತಯಾರಿಸಲಾಗಿದೆಯೇ, ಆಸ್ತಿ–ಪಾಸ್ತಿ ಕಳೆದುಕೊಂಡವರ ಸಂಖ್ಯೆ ಎಷ್ಟು?

ಇ) ಈ ಪಟ್ಟಿಯಲ್ಲಿ ಏನಾದರೂ ಬದಲಾವಣೆಯಾಗಿದೆಯೇ? ಬದಲಾವಣೆಯಾಗಿದ್ದರೆ ಕಾರಣಗಳೇನು?

ಈ) ಇದುವರೆಗೆ ಎಷ್ಟು ಜನರಿಗೆ ಮನೆಗಳನ್ನು ಕಟ್ಟಿಕೊಡಲಾಗಿದೆ, ಉಳಿದವರಿಗೆ ಮನೆಗಳನ್ನು ಕಟ್ಟಿಸಿಕೊಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) ಹೌದು

ಆ) ಹೌದು, ಆಸ್ತಿ–ಪಾಸ್ತಿ ಕಳೆದುಕೊಂಡವರ ಸಂಖ್ಯೆ 237.

ಇ) ಈ ಪಟ್ಟಿಯಲ್ಲಿ ಏನಾದರೂ ಬದಲಾವಣೆ ಮಾಡಿಲ್ಲ. ಆದರೆ, ಸಾರ್ವಜನಿಕರಿಂದ ಒಂದು ತಕರಾರು ಅರ್ಜಿ ಬಂದಿದ್ದು, ಅದು ಉಪವಿಭಾಗಾಧಿಕಾರಿ, ಇಂಡಿ ಇವರಲ್ಲಿ ವಿಚಾರಣೆಯ ಹಂತದಲ್ಲಿದೆ.

ಈ) ಇದುವರೆಗೆ ಒಟ್ಟು 137 ಮನೆಗಳನ್ನು ಕಟ್ಟಿಸಿ ಕೊಡಲಾಗಿದೆ. ಇನ್ನು 101 ಮನೆಗಳನ್ನು ಕಟ್ಟಿಸಿಕೊಡಲು ಸರ್ಕಾರ ಅನುದಾನ ರೂ. 39.80 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ವಿಷಯ:- ಅಂಗನವಾಡಿ ಸಹಾಯಕರಿಗೆ ವೇತನದಲ್ಲಿ ಹೆಚ್ಚಳ.

1463 (2450) ಶ್ರೀ ನಂಜೇಗೌಡ (ತುರುವೇಕೆರೆ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಗನವಾಡಿಗಳಲ್ಲಿ ಕೆಲಸ ಮಾಡುತ್ತಿರುವ ಅಂಗನವಾಡಿ ಶಿಕ್ಷಕರುಗಳಿಗೆ ಸರ್ಕಾರವು ಇತ್ತೀಚೆಗೆ ವೇತನವನ್ನು ಹೆಚ್ಚು ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಇದೇ ರೀತಿ ಅಂಗನವಾಡಿಯ ಸಹಾಯಕರುಗಳಿಗೆ ಸಂಬಳವನ್ನು ಹೆಚ್ಚು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ವಿಮಲ ಬಾಯಿ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):-

ಅ) ಹೌದು

ಆ) ಕೇಂದ್ರ ಸರ್ಕಾರದ ಗೌರವಧನದ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ಅಂಗನವಾಡಿ ಸಹಾಯಕಿಯರಿಗೂ ಸಹ ರೂ. 50-00ಗಳನ್ನು ದಿನಾಂಕ 1-11-95 ರಿಂದ ಹೆಚ್ಚುವರಿ ಸಂಭಾವನೆಯನ್ನಾಗಿ ಮಂಜೂರು ಮಾಡಿದೆ. ಆದ್ದರಿಂದ ಸಂಬಳ ಹೆಚ್ಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಅಂಗನವಾಡಿ ಕಾರ್ಯಕರ್ತೆಯವರಿಗೆ ಸಂಭಾವನೆ ಹೆಚ್ಚಿಸುವುದರ ಕುರಿತು.

1464 (2397) **ಹೆಚ್.ಬಿ. ನಂಜೇಗೌಡ (ತುರುವೇಕೆರೆ):-** ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅಂಗನವಾಡಿ ಕಾರ್ಯಕರ್ತೆಯವರಿಗೆ 100-00 ರೂಪಾಯಿ ಸಂಭಾವನೆ ಹೆಚ್ಚಿಸಿರುವುದು ನಿಜವಲ್ಲವೇ?

ಆ) ಅದೇ ರೀತಿ ಅಂಗನವಾಡಿ ಸಹಾಯಕಿಯವರಿಗೂ 100-00 ರೂ ಹೆಚ್ಚಿಗೆ ಸಂಭಾವನೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವರೇ?

ಶ್ರೀ ವಿಮಲ ಬಾಯಿ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):-

ಅ) ಹೌದು

ಆ) ಕೇಂದ್ರ ಸರ್ಕಾರದ ಗೌರವಧನದ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ಅಂಗನವಾಡಿ ಸಹಾಯಕಿಯರಿಗೂ ಸಹ ರೂ. 50-00 ಗಳನ್ನು ದಿನಾಂಕ:1-11-95 ರಿಂದ ಹೆಚ್ಚುವರಿ ಸಂಭಾವನೆಯನ್ನಾಗಿ ಮಂಜೂರು ಮಾಡಿರುವುದರಿಂದ ಅಂಗನವಾಡಿ ಸಹಾಯಕಿಯರಿಗೆ ಸಂಭಾವನೆ ಹೆಚ್ಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಬೆಳಗಾವಿ ಜಿಲ್ಲೆಯ ಸದಲಗಾ ಮತಕ್ಷೇತ್ರದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳ ಭರ್ತಿ.

1465 (2543) **ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಸದಲಗಾ):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಸದಲಗಾ ಮತಕ್ಷೇತ್ರದ ಜನವಾಡ, ಗಳತಗಾ, ಶಮಸೇವಾಡಿ, ಕಲ್ಲೋಳ, ನಣದಿ ಮತ್ತು ಮಾಂಗೂರ ಗ್ರಾಮಗಳಲ್ಲಿ ಸುಮಾರು ಒಂದೂವರೆ ವರ್ಷಗಳಿಂದಲೂ ಗ್ರಾಮ ಲೆಕ್ಕಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು ಮಾಹಿತಿಗಳನ್ನು ಪಡೆಯಲು ರೈತರು ತೊಂದರೆಗಳನ್ನು ಅನು-